**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. ನಂ.304/2011**

| | | |
|---|---|---|
| ಹೆಸರು | ವೆಂಕಟೇಶ್ | ಪ್ರಾ.ಸಾ.11 |
| ತಂದೆ ಹೆಸರು | ವೆಂಕಟಸ್ವಾಮಿ | ಚಾ.ಸಾ.12 |
| ವಯಸ್ಸು | 54 ವರ್ಷ | |
| ಕೆಲಸ | ಎ.ಎಸ್.ಐ | ಸಾ.ಪ್ರ.ವ.ಬೋ |
| ಹಾಲಿ ವಾಸ | ವಿಜಯಪುರ | ದಿ:-23.10.2024 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು 2010 ರಿಂದ 2017 ವರೆಗೆ ನಂದಗುಡಿ ಪೊಲೀಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:08.01.2011 ರಂದು ಚಾ.ಸಾ.16 ರವರು, ಚಾ.ಸಾ.10, 11, 13, 1 ರವರು ಮತ್ತು ನನ್ನನ್ನು ಸೇರಿ ಅರಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆ ಅನಾವರಣಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಒಂದು ವಾರದ ಹಿಂದೆ ಗಲಾಟೆ ಆಗಿದ್ದ ಕಾರಣ ನಮ್ಮನ್ನು ಸದರಿ ಗ್ರಾಮದಲ್ಲಿ ಬಂದೊಬಸ್ತ್ ಕರ್ತವ್ಯಕ್ಕೆ ನೇಮಿಸಿದ್ದು, ನಾವು ಕರ್ತವ್ಯದಲ್ಲಿದ್ದಾಗ ನಾವು ದಲಿತತ ಕಾಲೋನಿಯಲ್ಲಿ ಗಸ್ತು ಮಾಡುತ್ತಿದ್ದಾಗ, ಸಂಜೆ 7:15 ನಿಮಿಷ ಸಮಯದಲ್ಲಿ ಅರಳೆಗೆರೆ ನಾರಾಯಣಪ್ಪನವರ ಮನೆಯ ಮುಂದೆ ಆರೋಪಿಗಳು ನಮ್ಮನ್ನು ಅಡ್ಡಗಟ್ಟಿ ಚಾ.ಸಾ.1 ರವರ ಸಮವಸ್ತ್ರವನ್ನು ಹಿಡಿದು ಎಳೆದಾಗಿ, ಜೇಬನ್ನು ಕಿತ್ತುಹಾಕಿ, ಪ್ರಾಣ ಬೆದರಿಕೆ ಹಾಕಿ, ನಮಗೂ ಸಹ ಪ್ರಾಣ ಬೆದರಿಗೆ ಹಾಕಿ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿರುತ್ತಾರೆ. ನಾನು ದಿ:10.01.2011 ರಂದು ಚಾ.ಸಾ.17 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾಲು-1 ಅನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:-**

**ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**